**ಸಿವಿಲ್ ನ್ಯಾಯಾಧೀಶರು  ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.**

**ಹಿರೇಕೆರೂರು.**

**ಸಿ.ಸಿ.ನಂಬರ್‌ಃ223/2016**

ಸಿಡಬ್ಲ್ಯೂಃ1

ಪಿಡಬ್ಲ್ಯೂಃ2

| | | |
|---|---|---|
| ಸಾಕ್ಷಿಯ ಹೆಸರು | : | ಉಮ್ಮೆ ಸಲ್ಮಾ ಬಾನು |
| ಗಂಡನ ಹೆಸರು | : | ಮೊಹಮ್ಮದ್ ಇಬ್ರಾಹಿಂ |
| ವಯಸ್ಸು | : | 27 ವರ್ಷ |
| ಉದ್ಯೋಗ | : | ಮನೆಕೆಲಸ |
| ವಾಸಸ್ಥಳ | : | ಕಾಗಿನೆಲೆ |

ಇಂದು ದಿನಾಂಕಃ02.02.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

ಚಾಸಾ–5 ಮತ್ತು 6 ನನ್ನ ತಂದೆ ತಾಯಿ, ಚಾಸಾ–7 ರಿಂದ 11 ನನ್ನ ಸಂಬಂಧಿಕರು. ಆರೋಪಿ 1 ನನ್ನ ಗಂಡ, ಆರೋಪಿ 2 ಮತ್ತು 3 ನನ್ನ ಅತ್ತೆ ಮಾವ. ದಿನಾಂಕ 23.01.2014 ರಂದು ನನ್ನ ಮದುವೆ ಆರೋಪಿ 1 ರವರೊಂದಿಗೆ ಆಗಿರುತ್ತದೆ. ಮದುವೆ ಕಾಲಕ್ಕೆ 2 ತೊಲೆ ಬಂಗಾರ 50 ಸಾವಿರ ರೂಗಳನ್ನು ಕೊಡುವಂತೆ ಮಾತಾಗಿತ್ತು. ಆದರೆ ಬಂಗಾರದ ಬದಲಾಗಿ 1 ಲಕ್ಷ 50 ಸಾವಿರ ರುಗಳನ್ನು ವರೋಪಚಾರವಾಗಿ ಕೊಟ್ಟಿದ್ದೆವು. ಮದುವೆಯಾದ ನಂತರ ಆರೋಪಿತರು ನನ್ನನ್ನು 5 ತಿಂಗಳು ಚೆನ್ನಾಗಿ ನೋಡಿಕೊಂಡರು. ನಂತರ ಆರುೀಪಿತರು ನೀನು ಚೆನ್ನಾಗಿಲ್ಲ ಎಂದು ಮಾನಸಿಕವಾಗಿ ನನಗೆ ಹಿಂಸೆ ನೀಡಲು ಪ್ರಾರಂಭಿಸಿದರು. ತದನಂತರ ನನ್ನ ತವರು ಮನೆಯಿಂದ ಬಂಗಾರ ತರುವಂತೆ ಒತ್ತಾಯ ಹಾಕಿದರು. ಆದರೆ ಅವುಗಳನ್ನು ಸಹಿಸಿಕೊಂಡೆನು. ಈಗ ಸುಮಾರು 1 ವರ್ಷದ ಹಿಂದೆ ನನಗೆ ಹೆಣ್ಣು ಮಗಳು ಹುಟ್ಟಿದ್ದಾಳೆ. ಆರೋತರು ನನಗೆ ನೀನು ನಿನ್ನ ತವರು ಮನೆಯಿಂದ ಬಂಗಾರ ತರಲಿಲ್ಲ ಎಂದರೆ ಸೀಮೆ ಎಣ್ಣೆ ಹಾಕಿ ಸುಡುತ್ತೇವೆ ಎಂದು ಜೀವದ ಬೆದರಿಕೆ ಹಾಕಿದರು. ನಂತರ ನಮ್ಮ ಊರಿನ ಮತ್ತು ನಮ್ಮ ತವರು ಮನೆಯ ಊರಿನ ಹಿರಿಯರನ್ನು ಸೇರಿಸಿ ಪಂಚಾಯತಿ ಮಾಡಿಸಿ ಬೇರೆ ಮನೆ ಮಾಡಿ ಎಂದು ಹೇಳಿದರು. ನಾನು ನನ್ನ ಗಂಡ ಬೇರೆ ಮನೆಯಲ್ಲಿ ವಾಸವಿದ್ದಾಗಲು ಸಹ ಆರೋಪಿ 2 ಮತ್ತು 3 ಹಾಗೂ ನನ್ನ ಮೈದುನ ಮೊಹಿದ್ದೀನ್ ರವರು ಸಹ ಬಂದು ಚಿನಾಲಿ, ಹಾದರಗಿತ್ತಿ ಎಂದು ಅವಾಚ್ಯ ಶಬ್ದಗಳಿಂದ ಬೈಯ್ದಾಡಿದರು. ಮತ್ತು ನೀನು ಹೆಚ್ಚಿನ ಬಂಗಾರ ತರಲಿಲ್ಲ ಎಂದರೆ ನನ್ನ  ಗಂಡನಿಗೆ ಬೇರೆ ಮದುವೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿದರು. ನಂತರ ನೀನು ತರಲಿಲ್ಲ ಎಂದರೆ ನಿನನ್ನು ನೇಣು ಹಾಕುತ್ತೇವೆ ಎಂದು ಬೆದರಿಕೆ

ಸಹ ಹಾಕಿದರು. ದಿನಾಂಕ 30.01.2016 ರಂದು ಬೆಳಿಗ್ಗೆ 10 ಗಂಟೆ ಸುಮಾರಿಗೆ ಆರೋಪಿ 1 ರಿಂದ 3 ಹಾಗೂ ನನ್ನ ಮೈದುನ ಮೊಹಿದ್ದೀನ್ ನನ್ನ ಬಾಡಿಗೆ ಮನೆಗೆ ಬಂದು ಅವಾಚ್ಯ ಶಬ್ದಗಳಿಂದ ಬೈಯ್ದಾಡಿರುತ್ತಾರೆ. ಆರೋಪಿ 1 ನನ್ನ ತಾಯಿ ಚಾಸಾ-5 ರವರಿಗೆ ಫೋನ್ ಮಾಡಿ, ಬಂದು ನಿಮ್ಮ ಮಗಳ ಮುಖ ನೋಡಿಕೊಂಡು ಹೋಗಿ, ಅವಳನ್ನು ಕೊಲ್ಲುತ್ತೇವೆ ಎಂದು ಸಹ ಹೇಳಿದರು. ಆಗ ಚಾಸಾ-5 ಮತ್ತು 6 ಕಾಗಿನೆಲೆಯಿಂದ ಬಂದು ಆರೋಪಿತರಿಗೆ ಮತ್ತು ನನ್ನ ಮೈದುನ ಮೊಹಿದ್ದೀನ ರವರಿಗೆ ನನ್ನನ್ನು ಅವರೊಂದಿಗೆ ಕಳುಹಿಸುವಂತೆ ಕೇಳಿದರು. ಆಗ ಚಾಸಾ-5 ರವರಿಗೆ ಆರೋಪಿ 2 ಕೈಯಿಂದ ಮೈಕೈಗೆ ಹೊಡೆದು, ಕಾಲಿನಿಂದ ಒದ್ದು ಸಾದಾ ಸ್ವರೂಪದ ಗಾಯ ಪಡಿಸಿರತ್ತಾರೆ, ಆಗ ನನ್ನ ತಂದೆ ಅಲ್ಲಿಂದ ತಪ್ಪಿಸಿಕೊಂಡು ಹೋಗಿರುತ್ತಾರೆ. ಚಾಸಾ-5 ರವರಿಗೆ ನನ್ನ ಮೈದುನ ಮೊಹಿದ್ದೀನ ಸಿಕ್ಕ ಸಿಕ್ಕಲ್ಲಿಗೆ ಹೊಡೆದಿರುತ್ತಾರೆ. ಆರೋಪಿ 1 ನನ್ನ ತಲೆ ಹಿಡಿದು ಗೋಡೆಗೆ ಡಿಕ್ಕಿ ಪಡಿಸಿ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿರುತ್ತಾರೆ. ಅದರಿಂದ ನನಗೆ ಎಚ್ಚರ ತಪ್ಪಿದ್ದು, ನನ್ನನ್ನು ಚಾಸಾ-5 ಹಾವೇರಿ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಘಟನೆಯ ಕುರಿತು ನಾನು ದೂರು ಸಲ್ಲಿಸಿರುತ್ತೇನೆ. ನಂತರ ಪೋಲಿಸರು ಸ್ಥಳಕ್ಕೆ ಬಂದು ಪಂಚನಾಮ ಮಾಡಿರುತ್ತಾರೆ. ಪಂಚನಾಮ ಮಾಡಲು ಜಾಗವನ್ನು ನಾನೇ ತೋರಿಸಿರುತ್ತೇನೆ. ಆ ಕಾಲಕ್ಕೆ ಚಾಸಾ-2 ಮತ್ತು 3 ಇದ್ದರು. ಸದರಿ ಪಂಚನಾಮೆಯನ್ನು ದಿನಾಂಕ 01.02.2016 ರಂದು ಬೆಳಿಗ್ಗೆ 10 ರಿಂದ 12 ಗಂಟೆ ಅವಧಿಯಲ್ಲಿ ಮಾಡಿರುತ್ತಾರೆ. ಸಾಕ್ಷಿಯು ನಿಪಿ-1 ರ ಮೇಲೆ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ದೂರು ಮತ್ತು ಅವರ ಮೇಲಿನ ಸಹಿಯನ್ನು ಗುರುತಿಸಿದ್ದರಿಂದ ದೂರನ್ನು ನಿಪಿ-5 ಹಾಗೂ ಸಾಕ್ಷಿಯ ಸಹಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-3 ಫೋಟೋವನ್ನು ನೋಡಿ ಗುರುತಿಸಿ ಅದನ್ನು ಪಂಚನಾಮೆ ಕಾಲಕ್ಕೆ ತೆಗೆದಿದ್ದು ಎಂದು ನುಡಿಯುತ್ತಾರೆ.

(ಎಪಿಪಿ ರವರು ಚಾಸಾ-1 ರವರ ಮೈದುನರವರನ್ನು ಈ ಪ್ರಕರಣದಲ್ಲಿ ಹೆಚ್ಚುವರಿ ಆರೋಪಿಯಾಗಿ ಸೇರಿಸಲು ದಂಡ ಪ್ರಕ್ರಿಯಾ ಸಂಹಿತೆ 319 ರ ಅಡಿಯಲ್ಲಿ ಅರ್ಜಿ ಸಲ್ಲಿಸುವುದಾಗಿ ಸಮಯವಾಕಾಶವನ್ನು ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.